ಪಿಡಬ್ಲೂ: 1

ದಿಃ 02.12.2025 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.

ಪಾಟೀ ಸವಾಲುಃ ಪ್ರತಿವಾದಿ ಪರ ಶ್ರೀ ಕೆ ಎ ಆರ್ ವಕೀಲರಿಂದಃ

ಹೀಗೆ 25-30 ವರ್ಷಗಳ ಹಿಂದೆ ನಾನು ನನಗೆ ಮನೆ ಮಂಜೂರು ಮಾಡಿ ಕೊಡಿ ಎಂದು ಕೋರಿ ಗ್ರಾಮ ಪಂಚಾಯಿತಿಗೆ ಅರ್ಜಿ ಸಲ್ಲಿಸಿರುತ್ತೇನೆ. ಆ ಕುರಿತು ನನ್ನ ಬಳಿ ದಾಖಲಾತಿ ಇದೆ. ಹಿಂದೆ ಕ್ಷೇತ್ರ ಅಭಿವೃದ್ಧಿ ಅಧಿಕಾರಿ ಎಂಬುದು ಈಗ ತಾಲ್ಲೂಕು ಪಂಚಾಯಿತಿ ಅಧಿಕಾರಿ ಎಂದು ಆಗಿದೆ ಎಂದರೆ ಸರಿ. ಸ.ನಂ.1/3 ನನ್ನ ತಂದೆಗೆ ಸೇರಿದ ಜಾಗ. ನಾನು ಸ.ನಂ.1/3 ರ ಸ್ವತ್ತನ್ನು ನಾನು ಅಥವಾ ನನ್ನ ತಂದೆ ಸರ್ಕಾರಕ್ಕೆ ಬರೆದು ಕೊಟ್ಟಿರುವುದಿಲ್ಲ. ನನಗೆ ದಾವಾಸ್ವತ್ತು ಮಂಜೂರಾದ ಸಮಯದಲ್ಲಿ ನಮ್ಮ ಗ್ರಾಮದಲ್ಲಿ ಸುಮಾರು 20-22 ಜನಕ್ಕೆ ನಿವೇಶನಗಳು ಮಂಜೂರಾಗಿರುತ್ತವೆ. ನಾನು ತಿಳಿಸಿದಂತೆ ಮಂಜೂರಾತಿ ಮಾಡುವಾಗ ನಕ್ಷೆಯನ್ನು ತಯಾರಿಸಿ ನಂಬರ್ ಗಳನ್ನು ನೀಡಿರುತ್ತಾರೆ ಎಂದರೆ ಸರಿ. ಸದರಿ ನಕ್ಷೆಯಲ್ಲಿ ಯಾವ ಯಾವ ಸೈಟ್ ಪಕ್ಕ ಯಾವ ಯಾವ ನಂಬರ್ ನ ಸೈಟ್ ಬರುತ್ತದೆ ಎಂದು ತಿಳಿಸಿರುತ್ತಾರೆ. ಸದರಿ ತಯಾರಿಸಲ್ಪಟ್ಟ ನಕ್ಷೆಯನ್ನು ನ್ಯಾಯಾಲಯಕ್ಕೆ ನೀಡಿದ್ದೇನೆ. ಸ.ನಂ.1/3 ಕ್ಕೆ ಸರ್ಕಾರದವರು ಪರಿಹಾರ ನೀಡಿರುತ್ತಾರಾ ಎಂಬುದು ನನಗೆ ಗೊತ್ತಿಲ್ಲ. ದಾವಾಸ್ವತ್ತಿನ ಖಾತೆ ನನ್ನ ತಂದೆ ಹೆಸರಿಗೆ ಆಗಿರುತ್ತದೆ ಯಾವಾಗ ಆಗಿದೆ ನನಗೆ ಗೊತ್ತಿಲ್ಲ.

ನನಗೆ ಓದಲು ಬರೆಯಲು ಬರುವುದಿಲ್ಲ. ಜಂಜರ್ ನಂಬರ್ 55 ರಲ್ಲಿ ಅಂದರೆ ನಿಪಿ 1 ರಲ್ಲಿ ಹೇಮ್ಲಾನಾಯ್ಕ ಎಂಬುದು ಹೊರತು ಪಡಿಸಿ ಬೇರೆ ಏನು ಕಾಣುವುದಿಲ್ಲ ಎಂದರೆ ಗೊತ್ತಿಲ್ಲ. ಸಾಕ್ಷಿ ಮುಂದುವರೆದು ನನಗೂ ಕಾಣುವುದಿಲ್ಲ ಕಣ್ಣು ಮಬ್ಬು ಎಂದು ನುಡಿಯುತ್ತಾರೆ. ಜಂಜರ್ ನಂ.55 ಜಯಾಬಾಯಿ ಅಂದರೆ 1ನೇ ಪ್ರತಿವಾದಿ ಹೆಸರಿಗೆ. ಜಂಜರ್ ನಂ.56 ಆಶಾಬಾಯಿ ಹೆಸರಿನಲ್ಲಿ ಇದೆ ಎಂದರೆ ನನಗೆ ಗೊತ್ತಿಲ್ಲ. 2ನೇ ಪ್ರತಿವಾದಿಯೊಂದಿಗೆ 1ನೇ ಪ್ರತಿವಾದಿಗೆ ಇರುವ ಸಂಬಂಧ ಗೊತ್ತಿಲ್ಲ. ನನಗೆ ಮಂಜೂರಾದ ಜಾಗ ಜಂಜರ್ ನಂ.55 ಮತ್ತು 56 ಕ್ಕೆ ಬರುತ್ತದೆ ಎಂದು ತೋರಿಸಲು ದಾಖಲಾತಿ ನೀಡಿರುತ್ತೇನೆ. ನಾನು ದಾವಾ ಅನುಸೂಚಿಯಲ್ಲಿ ಪಂಚಾಯಿತಿ ಖಾತೆ ನಂಬರ್ ಬರೆದಿಲ್ಲ ಎಂದರೆ ಸರಿ. ನನ್ನ ಹೆಸರಿಗೆ ದಾವಾಸ್ವತ್ತಿನ ಖಾತೆ ಆಗಿರುವುದಿಲ್ಲ ಎಂದರೆ ಸರಿ ಅರ್ಜಿ ನೀಡಿರುತ್ತೇನೆ. ಪ್ರತಿವಾದಿಯರಿಗೆ ಪುರಲೇಹಳ್ಳಿ ಗ್ರಾಮದಲ್ಲಿ ಆಸ್ತಿ ಇದೆ ಎಂಬುದು ನನಗೆ ಗೊತ್ತಿಲ್ಲ. ಪ್ರತಿವಾದಿಯರ ಹೆಸರಿಗೆ ಖಾತೆ ಇರುವ ಸ್ವತ್ತು ನನಗೆ ಸಂಬಂಧಿಸಿದ ಸ್ವತ್ತು ಅಲ್ಲವೋ ಎಂಬುದು ನನಗೆ ಗೊತ್ತಿಲ್ಲ ಎಂದರೆ ಸರಿ.

ಜಂಜರ್ ನಂ. 55 ಮತ್ತು 56 ರತ್ನಾನಾಯ್ಕ ಮತ್ತು ಪಾರ್ವತಿಬಾಯಿಗೆ ಸೇರಿದ ಸ್ವತ್ತು ಎಂದರೆ ಗೊತ್ತಿಲ್ಲ. ಜಂಜರ್ ನಂ. 55 ಮತ್ತು 56 ರಲ್ಲಿ ಪ್ರತಿವಾದಿಯರ ಮನೆ ಸುಟ್ಟು ಹೋದ ಕಾರಣ ಹೊಸದಾಗಿ ಮನೆ ಕಟ್ಟಲು ಹೋದಾಗ ನಾನು ಈ ದಾವೆ ಸಲ್ಲಿಸಿರುತ್ತೇನೆ ಎಂದರೆ ಸರಿಯಲ್ಲ. ನನಗೆ ಮಂಜೂರಾಗಿರುವ ಜಾಗವನ್ನು ಗುರುತು ಮಾಡಿಕೊಡಿ ಎಂದು ಕೇಳಿ ನಾನು ಪಂಚಾಯಿತಿಗೆ ಅರ್ಜಿ ಸಲ್ಲಿಸಿರುತ್ತೇನೆ. ಸದರಿ ಅರ್ಜಿಯಂತೆ ಪಂಚಾಯಿತಿಯವರು ನನಗೆ ಮಂಜೂರಾದ ಜಾಗವನ್ನು ಗುರುತು ಮಾಡಿ ಕೊಟ್ಟಿರುವುದಿಲ್ಲ. ನಾನು ಪಂಚಾಯಿತಿಗೆ ಸಲ್ಲಿಸಿರುವ ಅರ್ಜಿ ಕುರಿತು ದಾಖಲಾತಿ ನ್ಯಾಯಾಲಯಕ್ಕೆ ನೀಡಿರುತ್ತೇನೆ. ಪ್ರತಿವಾದಿಯರು ಮನೆ ಕಟ್ಟಲು ಪ್ರಾರಂಭಿಸಿದ ಜಾಗ ನನಗೆ ಮಂಜೂರಾದ ಜಾಗ ಎಂದು ತಿಳಿಸಲು ನನ್ನ ಬಳಿ ಯಾವುದೇ ದಾಖಲಾತಿ ಇಲ್ಲ ಎಂದರೆ ಸರಿಯಲ್ಲ ನ್ಯಾಯಾಲಯಕ್ಕೆ ನೀಡಿದ್ದೇನೆ. ರತ್ನಾನಾಯ್ಕ ಹಾಗೂ ಪಾರ್ವತಿಬಾಯಿ ಜಂಜರ್ ನಂ. 55 ಮತ್ತು 56 ರ ಸ್ವತ್ತನ್ನು 1ನೇ ಪ್ರತಿವಾದಿಯ ಗಂಡನಿಗೆ ಖಾತೆ ಮಾಡಿಕೊಡಬಹುದು ಎಂದು ನೀಡಿದ ಹೇಳಿಕೆ ಮೇರೆಗೆ ಸದರಿ ಸ್ವತ್ತುಗಳ ಖಾತೆಯು 1ನೇ ಪ್ರತಿವಾದಿಯ ಹೆಸರಿಗೆ ಖಾತೆ ವರ್ಗಾವಣೆ ಆಗಿರುತ್ತದೆ ಎಂದರೆ ಸರಿಯಲ್ಲ. ನನಗೆ ಮಂಜೂರಾದ ಸ್ವತ್ತು ಎಲ್ಲಿದೆ ಎಂದು ನನಗೆ ಗೊತ್ತಿಲ್ಲದೇ ಇದ್ದರೂ ಸಹಾ ಪ್ರತಿವಾದಿಯರ ಸ್ವತ್ತನ್ನು ನನ್ನ ಸ್ವತ್ತು ಎಂಬ ಭ್ರಮೆಯಿಂದ ಸುಳ್ಳು ದಾವೆ ಸಲ್ಲಿಸಿದ್ದೇನೆ ಎಂದರೆ ಸರಿಯಲ್ಲ.

ದಾವಾಸ್ವತ್ತು ನನಗೆ ಮಂಜೂರಾಗಿಲ್ಲ ಎಂದು ಹೇಳಿ ದಿಃ06.07.2022 ಮತ್ತು ದಿಃ14.09.2021 ರಲ್ಲಿ ತಾಲ್ಲೂಕು ಪಂಚಾಯಿತಿಯವರು ಪ್ರತಿವಾದಿಯರಿಗೆ ಹಿಂಬರಹ ನೀಡಿರುತ್ತಾರೆ ಎಂದರೆ ಸರಿಯಲ್ಲ. ದಾಖಲಾತಿಗಳನ್ನು ಸೃಷ್ಟಿಮಾಡಿಕೊಂಡು ಸುಳ್ಳು ದಾವೆ ದಾಖಲಿಸಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಸುಳ್ಳು ದಾವೆ ದಾಖಲಿಸಿ ಪ್ರತಿವಾದಿಯರಿಗೆ ತಮ್ಮ ಸ್ವತ್ತಿನಲ್ಲಿ ಮನೆ ಕಟ್ಟಲು ತೊಂದರೆ ಮಾಡುತ್ತಿದ್ದೇನೆ ಎಂದರೆ ಸರಿಯಲ್ಲ.

ಮರು ವಿಚಾರಣೆ ಇಲ್ಲ.

( ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು )

ಸಾ ಓ ಹೇ ಕೇ ಸ ಇ ಒ

(ಶ್ರೀಮತಿ ಮಮತ.ಪಿ.)
ಅಪರ ಸಿವಿಲ್ ಜಡ್ಜ್ ಮತ್ತು ಜೆ ಎಂ ಎಫ್ ಸಿ.,
ಅರಸೀಕೆರೆ.